ಸಿ.ಸಿ..ನಂ.215-24

ಪಿ.ಡಬ್ಲ್ಯೂ-1

ದಿನಾಂಕ.24-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎ . ಆರ್ ವಕೀಲರಿಂದಃ**

1. ನನ್ನ ತಾಯಿ ಮನೆ ಆಂದ್ಲೆ ಯಾಗಿರುತ್ತದೆ . ನಾನು 1990 ನೆ ಸಾಲಿನಲ್ಲಿ ನನ್ನ ಮದುವೆಯಾಗಿರುತ್ತೇನೆ . ನನ್ನನ್ನು ಆರ್ಯಾ ದುರ್ಗಾ ದೇವಸ್ಥಾನದ ಹತ್ತಿರ ಇರುವ ಉಲ್ಲಾಸ ಸಪ್ರೆ ಎಂಬುವವರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ . ಪಿರ್ಯಾದಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು . ನನಗೆ ಅರೋಪಿಯ ಪರಿಚಯ ತುಂಬಾ ವರ್ಷಗಳಿಂದ ಇರುತ್ತದೆ . ನನ್ನ ಮಗಳ ಮದುವೆ ಮಾಡಿ ಕೊಟ್ಟಾಗಿನಿಂದಲೂ ಆತನ ಪರಿಚಯ ಇರುತ್ತದೆ . ನನ್ನ ಮಗಳ ಮದುವೆಯನ್ನು ವಿಶ್ವನಾಥ ಶರ್ಮಾ ರವರಿಗೆ ಸುಮಾರು 9 ವರ್ಷಗಳ ಹಿಂದೆ ಮದುವೆ ಮಾಡಿ ಕೊಟ್ಟಿರುತ್ತೇನೆ . ಆರೋಪಿಯು ನಮ್ಮ ಅಳಿಯನ ಮನೆಗೆ ಅಂದರೆ ಆಂದ್ರಾದಲ್ಲಿರುವ ಕಾಳಹಸ್ತಿಯಲ್ಲಿ ಬರುತ್ತಿದ್ದ ಏಕೆಂದರೆ ನಾವು ಪ್ರತಿವರ್ಷ ಮೇ ತಿಂಗಳಿನಲ್ಲಿ ಅಲ್ಲಿಗೆ ಹೋಗುತ್ತಿದ್ದೆವು . ದಿಃ26-10-2019 ರ 4 ದಿನದ ಪೂರ್ವದಲ್ಲಿ ಆರೋಪಿಯು ನಮ್ಮ ಮನೆಗೆ ಬಂದು ಹಣವನ್ನು ಕೇಳಿರುತ್ತಾನೆ . ನಾನು ಆತನಿಗೆ ಹಣವನ್ನು ದಿಃ26-10-2019 ರಂದು ಕೊಟ್ಟಿರುತ್ತೇನೆ . ಆತನು ಒಬ್ಬನೆ ಬಂದಿದ್ದ . ಆತನು ಆರ್ಯಾ ದುರ್ಗಾ ದೇವಸ್ಥಾನದ ಬಳಿ ಇರುವ ರೂಮನಲ್ಲಿ ಉಳಿದು ಕೊಂಡಿದ್ದ .

2. ಆಗ ಅತನು ಎಷ್ಟು ದಿನ ಆ ರೂಮದಲ್ಲಿ ಉಳಿದು ಕೊಂಡಿದ್ದ ಎಂದು ನನಗೆ ಗೊತ್ತಿಲ್ಲ . ಆದರೆ ಅವನು ದಿಃ26-10-2019 ರ 4 ದಿನ ಮೊದಲು ಅಯ್ರಾದುರ್ಗಾ ದೆವಸ್ಥಾನದ ಬಳಿ ಸುತ್ತುತ್ತಿದ್ದ . ನಾನು ನೋಡಿದ್ದೆ . ನಂತರ ದಿಃ26-10-2019 ರಂದುಹಣ ವನ್ನು ಆರೋಪಿಗೆ ಕೊಟ್ಟಿರುತ್ತೇನೆ . ಅಂಕೋಲಾದಿಂದ ಕಾಳಹಸ್ತಿಗೆ ಎಷ್ಟು ದೂರ ವಾಗುತ್ತದೆ ಎಂದು ನನಗೆ ಗೊತ್ತಿಲ್ಲ . ನಾನು ಟ್ರೆನ ದಲ್ಲಿ ಹೋಗುತ್ತೇನೆ . ನನ್ನ ಮಗಳು ನನಗೆ ಕರೆದು ಕೊಂಡು ಹೋಗುತ್ತಾಳೆ . ನಾವು ಈ ದಿನ 3-00 ಗಂಟೆಗೆ

ಟ್ರೇನ ಹತ್ತಿದರೆ ಮರು ದಿನ ಬೆಳಿಗ್ಗೆ 8-00 ಮಗಳ ಮನೆ ತಲುಪುತ್ತಿದ್ದೆ . ನಾವು ರೆಣುಗೊಂಟಾದಲ್ಲಿ ಇಳಿಯುತ್ತಿದ್ದೆವು . ಅಲ್ಲಿಂದ ರಿಕ್ಷಾ ಮಾಡಿಕೊಂಡು ಮಗಳ ಮನೆಗೆ ಹೋಗುತ್ತಿದ್ದೆವು . ಇಲ್ಲಿಂದ ನಾವು ಹುಬ್ಬಳ್ಳಿ ಮಾರ್ಗ ವಾಗಿ ಹೋಗುತ್ತಿದ್ದೆವು . ಹುಬ್ಬಳ್ಳಿಗೆ ಇಲ್ಲಿಂದ ಬಸ್ ಹತ್ತುತ್ತಿದ್ದೆವು . ಇಲ್ಲಿಂದ ಕಾಳಹಸ್ತಿ 700 ಕಿ ಮೀ ಗಿಂತ ಜಾಸ್ತಿ ಯಾಗುತ್ತದೆ ಎಂದರೆ ಸರಿ . ಅವನು ದಿಃ26-10-2019 ಕ್ಕೆ ನಮ್ಮ ಮನೆಗೆ ಬಂದಾಗ ಒಬ್ಬನೆ ಬಂದಿದ್ದ . ಆತನ ಜೊತೆಗೆ ವಿಶ್ವನಾಥ ಶರ್ಮಾ ಅಥವಾ ಬೇರೆ ಯಾರು ಬರಲಿಲ್ಲ . ಆತನ ಹಣವನ್ನು ತೆಗೆದು ಕೊಂಡ ಮೇಲೆ ಬೇರೆ ಎಲ್ಲಿ ಹೋಗಿರುತ್ತಾನೆ ಎಂದು ನನಗೆ ಗೊತ್ತಿಲ್ಲ . ಅದರ ಪ್ರಕಾರವಾಗಿ ವಿವರವಾಗಿ ನಿಮ್ಮ ದೂರಿನಲ್ಲಿ ಬರೆಯಲಿಲ್ಲ ಎಂದರೆ ಆತನು ಹಣವನ್ನು ತೆಗೆದುಕೊಂಡು ಎಲ್ಲಿ ಹೋಗಿರುತ್ತಾನೆ ಎಂದು ನನಗೆ ಗೊತ್ತಿಲ್ಲ .ದಿಃ 26-10-2019 ರಂದು ನಮ್ಮ ಮನೆಗೆ ಬಂದಾಗ ಊಟ ಉಪಚಾರ ಕೊಡಲಿಲ್ಲ ಬರಿ ನೀರನ್ನು ಮಾತ್ರ ಕೊಟ್ಟಿರುತ್ತೇನೆ . ಅವರಿಗೆ ಹಣವನ್ನು ಕೊಟ್ಟಿರುತ್ತಿರಿ ಎಂದರೆ ಹೌದು . ಅವರಿಗೆ ಹಣವನ್ನು ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ . ರೂ 500 ಮುಖ ಬೆಲೆಯ ರೂ 7 ಲಕ್ಷ ಮತ್ತು 100 ಮುಖ ಬೆಲೆಯ ರೂ 3 ಲಕ್ಷ ಹಣ ಕೊಟ್ಟಿರುತ್ತೇನೆ . ಆ ಹಣವನ್ನು ಕೊಟ್ಟಿದ್ದಕ್ಕೆ ಬರವಣಿಗೆ ಏನಾದರೂ ಮಾಡಿದ್ದೀರಾ ಎಂದರೆ ನಾನು ಪಟ್ಟಿ ಯಲ್ಲಿ ಡೈರಿಯಲ್ಲಿ ಬರೆದಿಟ್ಟಿಲ್ಲ . ನನ್ನ ಅಳಿಯ ಹೇಳಿದ ಕಾರಣ ವಿಶ್ವಾಸದ ಮೇಲೆ ಅರೋಪಿಗೆ ಹಣ ಕೊಟ್ಟಿರುತ್ತೇನೆ . ಆರೋಪಿ ಮತ್ತು ನನ್ನ ಅಳಿಯ ಮೊದಲು ಒಂದೆರಡು ಸಲ ಒಟಿಟಗೆ ಅರ್ಯಾ ದುರ್ಗಾ ದೇವಸ್ಥಾನಕ್ಕೆ ಬಂದ್ದಿರುತ್ತಾರೆ . ಈ ಪ್ರಕರಣವಾದ ನಂತರ ಅವರಿಬ್ಬರೂ ಬಟ್ಟಿಗೆ ಆರ್ಯಾದುರ್ಗಾ ದೆವಸ್ಥಾನಕ್ಕೆ ಬಂದಿಲ್ಲ ಅವರಿಬ್ಬರೂ ಒಟ್ಟಿಗೆ ಬಂದಾಗ ನನ್ನ ಅಳಿಯ ನಮ್ಮ ಮನೆಯಲ್ಲಿ ಇರುತ್ತಿದ್ದರು ಆರೋಪಿಯು ಎಲ್ಲಿ ಉಳಿದು ಕೊಳ್ಳುತಿದ್ದ ಎಂದು ನನಗೆ ಗೊತ್ತಿಲ್ಲ . ಆತನು ನಿಮ್ಮ ಅಳಿಯನ ಫ್ರೆಂಡ್ ಆಗಿದ್ದರೆ ಆತನನ್ನು ನಿಮ್ಮ ಮನೆಯಲ್ಲಿ ಉಳಿಸಿ ಕೊಳ್ಳುತ್ತಿದ್ದೀರಿ ಎಂದರೆ ಅವರನ್ನು ಉಳಿಸಿಕೊಳ್ಳುತ್ತಿರಲಿಲ್ಲ ಆತನು ಹೋಗುತ್ತಿದ್ದ . ಆತನ ಮೇಲೆ ಅಷ್ಟೊಂದು ವಿಶ್ವಾಸ ಇದ್ದರೆ ಅವರನ್ನು ನಿಮ್ಮ ಮನೆಯಲ್ಲಿ ಇಟ್ಟು ಕೊಳ್ಳಬೇಕಾಗಿತ್ತು ಬೇರೆ ಕಡೆ ಉಳಿಯಲು ಆತನನ್ನು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ . ನಾನು 35 ವರ್ಷ ದಿಂದ ಅಂದರೆ ನನ್ನ ಮದುವೆಯಾಗಿ ಬಂದಾಗಿನಿಂದ ನಿಮ್ಮನ್ನು ನೋಡುತ್ತಿದ್ದೇನೆ . ನಾನು ಅರೊಪಿಗೆ ಹಣವನ್ನು ಕೊಟ್ಟ ನಂತರ 3 ತಿಂಗಳಲ್ಲಿ ಹಣವನ್ನು ವಾಪಸ್ಸು ಕೊಡುತ್ತೇನೆ ಎಂದು ಹೆಳಿದ್ದರು ಆದರೆ

ಹಣ ಕೊಡಲಿಲ್ಲ .ನಂತರ ಫೆಬ್ರವರಿ 2022 ನೆ ಸಾಲಿನಲ್ಲಿ ನಮ್ಮ ಮನೆಗೆ ಬಂದು ಚೆಕ್ ನ್ನು ಕೊಟ್ಟಿರುತ್ತಾನೆ . ಆತನು ಚೆಕ ನ್ನು ಕೊಟ್ಟು ಕೆನರಾ ಬ್ಯಾಂಕ್ ಗೆ ಹಾಜರ ಪಡಿಸಿ ಹಣ ಪಡೆದು ಕೊಳ್ಳಿ ಎಂದು ಹೇಳಿರುತ್ತಾನೆ . ನಂತರ ನಾನು 2 ದಿನ ಬಿಟ್ಟು ಕೆನರಾ ಬ್ಯಾಂಕ ಗೆ ಹೋಗಿ ಸದ್ರಿ ಚೆಕ ನ್ನು ನಗದಿಕರಣಕ್ಕಾಗಿ ಹಾಕಿರುತ್ತೇನೆ . ಅದು ಕೆನರಾ ಬ್ಯಾಂಕಿನ ಚೆಕ್ ಆಗಿರುತ್ತದೆ . ನನಗೆ ದಿನಾಂಕ ನೆನಪಿಲ್ಲ . ನಾನು ಕೆನರಾ ಬ್ಯಾಂಕಗೆ ಸದ್ರಿ ಚೆಕ ನ್ನು ಹಾಜರ ಪಡಿಸಿದಾಗ ಅರೊಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕಿನವರು ಹೇಳಿದರು ಆ ಕಾರಣದಿಂದ ಆ ಚೆಕ ನ್ನು ತಂದು ನಮ್ಮ ವಕೀಲರ ಬಳಿ ಕೊಟ್ಟಿರುತ್ತೇನೆ . ಅಂದರೆ ಕೆನರಾ ಬ್ಯಾಂಕನಲ್ಲಿ ಅವರಿಗೆ ಹಣ ಇಲ್ಲವಾಗಿತ್ತು ಎಂದರೆ ಸರಿ . ನಾನು ವಕಿಲರ ಮೂಲಕ ನೋಟಿಸನ್ನು ಕೊಟ್ಟಿರುತ್ತೇನೆ . ವಕೀಲರು ಕೇಸ್ ಮಾಡೋಣ ಎಂದು ಹೇಳಿದರು . ಆ ನಂತರದಲ್ಲಿ ಪ್ರಕರಣ ನಡೆಯುತ್ತಿರುತ್ತದೆ . ಸಾಕ್ಷಿ ಒಂದು ದಾಖಲಾತಿ ತೋರಿಸಲಾಗಿ ಸಾಕ್ಷಿ ಯು ನನಗೆ ಕಣ್ಣಿಗೆ ಕಾಣುವುದಿಲ್ಲ ಕನ್ನಡಕ ಹಾಕಿ ಬರಲಿಲ್ಲ ಎಂದು ಹೇಳಿರುತ್ತಾರೆ ಕನ್ನಡಕ ಮನೆಯಲ್ಲಿ ಇರುತ್ತದೆ . ಸದ್ರಿ ದಾಖಲಾತಿ ದಿಃ30-05-2022 ರಂದು ನಾನು ನನ್ನ ಕಕ್ಷಿಗಾರರ ಪರವಾಗಿ ನಿಮ್ಮ ವಕೀಲರಿಗೆ ನೀಡಿದ ಮರು ಉತ್ತರವಾಗಿರುತ್ತದೆ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ . ಪುನಃ ಸಾಕ್ಷಿ ನನಗೆ ಆರೋಗ್ಯ ಸಮಸ್ಯೆ ಇರುತ್ತದೆ ಸರಿಯಾಗಿ ನೆನಪು ಇರುವುದಿಲ್ಲ . ನಾನು ಮಣಿಪಾಲ ಗೆ ಮತ್ತು ಇತರ ಆಸ್ಪತ್ರೆಗೆ ಹೋಗುತ್ತಿದ್ದೇನೆ . ಈ ಪ್ರಕರಣದ ಹಣ ಬಂದರೆ ನನಗೆ ಅನೂಕಲೂ ವಾಗುತ್ತದೆ . ಆರೋಪಿ ಯು ಕೊಟ್ಟ ಮಾಹಿತಿ ಪ್ರಕಾರ ನೀವು ಕೊಟ್ಟ ನೋಟಿಸು ಅರೋಪಿಗೆ ತಲುಪಿದ್ದು ಆರೊಜಾಪಿಯು ಅಂಕೊಲಾ ಕೊರ್ಟಿಗೆ ಬಂದು ನನಗೆ ಭೇಟಿ ಯಾಗಿ ಕೊಟ್ಟ ಮಾಹಿತಿ ಪ್ರಕಾರ ನಾನು ಮರು ಉತ್ತರ ನಿವ್ಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಸುಮ್ಮನೆ ನಿಂತಿರುತ್ತಾರೆ . ಸದ್ರಿ ಮರು ಉತ್ತರವನ್ನು ರಜಿಷ್ಟರ ಪೊಸ್ಟ ಮೂಲಕ ನಿಮ್ಮ ವಕೀಲರಿಗೆ ಕಳುಹಿಸಿ ಕೊಟ್ಟಿರುತ್ತೇನೆ ಎಂದರೆ ನನಗೆ ನೆನಪಿಲ್ಲ . ಆ ಪೊಸ್ಟ ಮಾಡಿದ ನಂತರ ನಾನು ಮತ್ತ ಆರೋಪಿ ಆರ್ಯಾ ದುರ್ಗಾ ದೆವಸ್ಥಾನಕ್ಕೆ ಬಂದಿದ್ದೆವು ಎಂದರೆ ನನಗೆ ಗೊತ್ತಿಲ್ಲ . ಆ ದಿನ ನಾವು ಆಯಾ ದುರ್ಗಾ ದೇವಿಯ ದರ್ಶನ ಪಡೆದು ಪ್ರದಕ್ಷಿಣೆ ಹಾಕಿ ಆದ ನಂತರ ನನಗೆ ಬಂದು ಪೋನ ಕಾಲ ಬಂದಿತ್ತು ಆ ಸಮಯದಲ್ಲಿ ಆರೋಪಿಯು ನಿಮ್ಮ ಮನೆಯ ಹತ್ತಿರ 10 ರಿಂದ 15 ನಿಮಿಷ ಕಾಲ ನಿಂತು ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ಅರೋಪಿಯು ನನ್ನ

ಬಳಿಯಲ್ಲಿ ಉಜ್ವಲಾ ಸಪ್ರೆ ಯಾರು ಎಂದರೆ ಯಾರು ಅವರನ್ನು ತೋರಿಸಿ ಎಂದು ನನ್ನ ಬಳಿ ಹೇಳಿದ ಕಾರಣ ನಾನು ಅವರನ್ನು ನಿಮ್ಮ ಮನೆ ಬಳಿ ನಿಲ್ಲಿಸಿದ್ದೆ . ಆಗ ನೀವು ಆ 15 ನಿಮಿಷಗಳ ಅವಧಿಯಲ್ಲಿ 2 ಸಲ ದೇವಸ್ಥಾನಕ್ಕೆ ಬಂದು ಹೊರಗೆ ಒಳಗೆ ಹೋಗಿರುತ್ತಿರಿ ಆದರೂ ಸಹ ಅರೋಪಿಯನ್ನು ನೀವು ಗುರುತಿಸಲೂ ಇಲ್ಲ ಮಾತನಾಡಿಸಲು ಇಲ್ಲ ಎಂದರೆ ನನಗೆ ಅವರು ಬಂದಿದ್ದು ಗೊತ್ತಿಲ್ಲ ನಾನು ಅವರನ್ನು ನೋಡಿಲ್ಲ . ದಿಃ30-5-2022 ರಂದು ಪ್ರಪ್ರಥಮವಾಗಿ ಅಂಕೊಲಾ ತಾಲೂಕಿಗೆ ಕಾಲು ಇಟ್ಟಿದ್ದು ಎಂದರೆ ಸರಿಯಲ್ಲ . ಅವರ ಮರು ಉತ್ತರದಲ್ಲಿ ಅವರು ಹೇಳಿರುತ್ತಾರೆ ನಿಮ್ಮದ್ದು ಮತ್ತು ನಿಮ್ಮ ಗಂಡನದ್ದು ಯಾರದ್ದು ಸಹ ಪರಿಚಯ ಅರೋಪಿಗೆ ಇಲ್ಲ ಎಂದರೆ ಸರಿಯಲ್ಲ . ಅವರು ನಿಮ್ಮ ಜೊತೆ ಯಾವತ್ತೂ ಸಹ ವ್ಯವಹಾರ ಮಾಡುವ ಪ್ರಮೆಯವೆ ಇಲ್ಲ ಎಂದರೆ ಸರಿಯಲ್ಲ . ಆತನು ನ್ಯಾಯಾಲಯಕ್ಕೆ ಬಂದಾಗ ಆತನೊಂದಿಗೆ ನೀವು ಯಾವತ್ತಾದರೂ ಮಾತನಾಡಿದ್ದೀರಾ ಎಂದರೆ ಹೌದು ಆತನು ನ್ಯಾಯಾಲಯಕ್ಕೆ ಬಂದಾಗ ಹಣವನ್ನು ಕೊಡುತ್ತೇನೆ ಎಂದು ಮತ್ತು ರಾಜಿ ಮಾಡಿ ಕೊಳ್ಳುತ್ತೇನೆ ಎಂದು ನನ್ನ ಬಳಿ ನ್ಯಾಯಾಲಯದ ಹೊರಗಡೆ ಮಾತನಾಡಿಕೊಂಡು ಹೋಗಿದ್ದ . ಆ ಹಣವನ್ನು ಹಂತ ಹಂತವಾಗಿ ನ್ಯಾಯಾಲಯದಲ್ಲಿ ಕೊಟ್ಟು ಮುಗಿಸುತ್ತೇನೆ ಎಂದು ಹೇಳಿರುತ್ತಾನೆ . ಆ ದಿನ ನಿಮ್ಮ ವಕೀಲರು ವಿಶ್ವನಾಥ ಶರ್ಮಾ ರವರ ವ್ಯವಹಾರ ಮುಗಿಸಿದರೆ ಇದನ್ನು ಕೂಡ ಮುಗಿಸುತ್ತೇನೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ . ನಿಮ್ಮಿಂದ ಅವರು ಒಂದು ಪೈಸಾ ಹಣವನ್ನು ಪಡೆದುಕೊಂಡಿಲ್ಲ ನಿಮ್ಮ ಅಳಿಯನ ಕಡೆಯಿಂದ ಚಿಟ್ ಫಂಡ್ ದಿಂದ ರೂ 7 ಲಕ್ಷ ಹಣವನ್ನು ಅರೋಪಿ ಪಡೆದು ಕೊಂಡದ್ದು ಎಂದರೆ ಸರಿಯಲ್ಲ . ನಿಮ್ಮ ಅಳಿಯದಿಂದ ಪಡೆದು ಕೊಂಡ ರೂ 7 ಲಕ್ಷ ಹಣಕ್ಕೆ ಬದ್ರತೆಗಾಗಿ ಆತನು ಕಾಳಹಸ್ತಿಯಲ್ಲಿಯೇ ನಿಮ್ಮ ಅಳಿಯನಿಗೆ ಚೆಕ ನ್ನು ಕೊಟ್ಟಿದ್ದನು ಅದನ್ನೆ ದೂರುಪಯೋಗ ಪಡಿಸಿಕೊಂಡು ಈ ಪ್ರಕರಣ ಹಾಕಿರುವುದು ಎಂದರೆ ಸರಿಯಲ್ಲ . ಅಳಿಯನಿಂದ ಪಡೆದುಕೊಂಡ ಹಣಕ್ಕೆ ಆ ಚೆಕ ನ್ನು ಕೊಟ್ಟಿದನ್ನೆ ದುರುಪಯೋಗೇ ಪಡಿಸಿಕೊಂಡು ಈ ಪ್ರಕರಣ ಹಾಕಿದ್ದು ಅಂದರೆ ನನ್ನ ಅಳಿ ಯ ಹಣ ಕೊಟ್ಟಿಲ್ಲ ನಾನು ಅರೋಾಪಿಗೆ ಹಣ ಕೊಟ್ಟಿದ್ದೆ . ನಿಮ್ಮ ಅಳಿಯನಿಗೆ 3 ರಿಂದ 4 ಲಕ್ಷ ಹಣ ಕೊಡುವುದು ಅರೋಪಿ ಬಾಕಿ ಇಟ್ಟು ಕೊಂಡಿರುತ್ತಾನೆ ಹೊರತು ನಿಮ್ಮಿಂದ ಯಾವುದೆ ಹಣವನ್ನು ಅತನು ಪಡೆದು ಕೊಂಡಿಲ್ಲ ಎಂದರೆ ಸರಿಯಲ್ಲ . ಆದರಿಂದ ಅರೋಪಿಯು ನಿಮ್ಮನ್ನು ಗುರುತಿಸಿದ್ದು ಇಲ್ಲ .

ನೀವು ಅರೋಪಿಯನ್ನು ಗುರುತಿಸಿದ್ದು ಇಲ್ಲ ಎಂದರೆ ಸರಿಯಲ್ಲ . ಆರೋಪಿ ಮತ್ತು ನಿಮ್ಮ ಮಧ್ಯೆ ಯಾವುದೇ ವ್ಯವಹಾರ ಅದದ್ದು ಇಲ್ಲ ಎಂದರೆ ಸರಿಯಲ್ಲ . ದಿಃ30-5-2022 ರ ಪೂರ್ದಲ್ಲಿ ಅರೋಪಿ ಯಾವತ್ತು ಸಹ ಅಂಕೋಲಾಗೆ ಮತ್ತು ನಿಮ್ಮ ಮನೆಗೆ ಬಂದದ್ದು ಇಲ್ಲ ಎಂದರೆ ಸರಿಯಲ್ಲ. ಆತನಿಗೆ ಆರ್ಯಾದುರ್ಗಾ ದೇವಸ್ದಾನ ಎಲ್ಲಾಗುತ್ತದೆ ಎಂದು ಸಹ ಗೊತ್ತಿಲ್ಲ ಎಂದರೆ ಸರಿಯಲ್ಲ . ನೀವು ವಿಶ್ವನಾಥ ಶರ್ಮಾ ರವರ ಅತ್ತೆ ಎಂದು ಸಹ ಅರೋಪಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ . ನೀವು ಕಾಳಹಸ್ತಿಗೆ ಹೋದಾಗ ಅರೋಪಿಗೆ ಭೇಟಿ ಯಾಗಿದ್ದೀರಿ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ .

3. ಸದ್ರಿ ರೂ 10 ಲಕ್ಷ ಹಣ ನಿಮ್ಮ ಬಳಿ ಹೆಗೆ ಬಂದಿತು ಎಂದರೆ ನನ ಗಂಡ ಮತ್ತು ನನ್ನ ಮಾವ ದೆವಸ್ದಾನದಲ್ಲಿ ಕೆಲಸ ಮಾಡುತ್ತಿದ್ದರು ಅವರು ಗಳಿಸಿದ್ದ ಹಣ ವಾಗಿರುತ್ತದೆ . ಇಷ್ಟು ದೊಡ್ಡ ಮೊತ್ತದ ಹಣ ಕೊಬೇಕಾದರೆ ಚೆಕ್ ಮುಖಾಂತರ ಅಥವಾ ಬ್ಯಾಂಕ್ ಖಾತೆ ಮುಖಾಂತರ ಟ್ರಾನ್ಸಪರ ಮಾಡಬೇಕು ಎಂದರೆ ನನಗೆ ಬ್ಯಾಂಕಿನಿಂದ ಹಣ ತಂದು ಕೊಡುವರು ಯಾರು ಇಲ್ಲ ನನ್ನ ಗಂಡನೂ ಇಲ್ಲ ಆ ಕಾರಣದಿಂದ ಹಣವನ್ನು ಮನೆಯಲ್ಲಿ ಇಟ್ಟು ಕೊಳ್ಳುತಿದ್ದೆ . ಅಷ್ಟು ದೊಡ್ಡ ಮೊತ್ತದ ಹಣವನ್ನು ಮನೆಯಲ್ಲಿ ಇಟ್ಟು ಕೊಂಡರೇ ಅದುಕಾನೂನು ರೀತಿಯಲ್ಲಿ ಸರಿಯಲ್ಲ ಎಂದರೆ ಆಗ ನಾನು ಹಣವನ್ನು ಇಟ್ಟು ಕೊಂಡಿದ್ದೆ . 30 ರಿಂದ 35 ವರ್ಷ ಗಳ ಹಿಂದೆ ಆರ್ಯಾದುರ್ಗಾ ದೇವಸ್ದಾನದಲ್ಲಿ ಒಂದು ದರೋಡೆ ಪ್ರಕರಣ ವಾಗಿತ್ತು ಎಂದರೆ ಅದು ನನ್ನ ಮದುವೆ ಪೂರ್ವದಲ್ಲಿ . ಆ ರೀತಿ ಭಯದ ವಾತಾವರಣ ಇದ್ದಾಗ ಅಷ್ಟು ದೊಡ್ಡ ಮೊತ್ತದ ಹಣವನ್ನು ಮೆನೆಯಲ್ಲಿ ಹೇಗೆ ಇಟ್ಟು ಕೊಳ್ಳುತ್ತಿರಿ ಎಂದರೆ ನನಗಾಲಿ ನನ್ನ ಮಾವನಿಗಾಲಿ ಬ್ಯಾಂಕಿನ ವ್ಯವಹಾರ ಗೊತಿಲ್ಲ ನನ್ನ ಗಂಡ ತೀರಿ ಕೊಂಡಿರುತ್ತಾರೆ ಆ ಕಾರಣದಿಂದ ಮನೆ ಯಲ್ಲಿ ಇಟ್ಟು ಕೊಂಡಿದ್ದೆ . ಅಷ್ಟೊಂದು ಬದ್ರತೆ ಇಲ್ಲದಿದ್ದಾಗ ಆರೋಪಿಗೆ ಹೇಗೆ ಹಣ ಕೊಟ್ಟಿರುತ್ತಿರಿ ಎಂದರೆ ಅವರು ನನ್ನ ಅಳಿಯದೊಂದಿಗೆ ಕಾಳಹಸ್ತಿ ದೆವಸ್ದಾನದಲ್ಲಿ ಪ್ರತಿದಿನ ಪಾರಾಯಣ ಮಾಡುತ್ತಾರೆ ಆರೋಪಿ ನನ ಅಳಿಯನಿಗೆ ಪರಿಚಯಸ್ದನಾಗಿದ್ದರಿಂದ ಪ್ರಿತಿ ವಿಶ್ವಾಸದ ಅಧಾರದ ಮೇಲೆ ಹಣ ಕೊಟ್ಟಿರುತ್ತೇನೆ . ದಿಃ30-5-2022 ರ ನೋಟಿಸನಲ್ಲಿ ಆರೋಪಿಯು ನಿಮ್ಮ ಹತ್ತಿರ ಯಾವುದೆ ವ್ಯವಹಾರ ಇಲ್ಲ ಎಂದು ಬರೆದಿರುತ್ತಾನೆ ಎಂದರೆ ಆತನು ಸುಳ್ಳು ಹೇಳುತ್ತಿದ್ದಾನೆ .ದಿಃ26-10-2019 ರಂದು ನಿಮ್ಮ ಬಳಿ ರೂ 10 ಲಕ್ಷ ಇದ್ದದ್ದು ಸುಳ್ಳು ಕೊಟ್ಟದ್ದು ಸುಳ್ಳು ಎಂರೆ ಸರಿಯಲ್ಲ . ಆ ದಿನ

ರೂ 10 ಲಕ್ಷ ಹಣವನ್ನು ಆರೊಪಿಗೆ ಕೊಟ್ಟ ಬಗ್ಗೆ ಏನು ಸಾಕ್ಷಿ ಇರುತ್ತದೆ ಎಂದರೆ ಆ ದಿನ ಯಾರು ಇರಲಿಲ್ಲ ನಾನೆ ಸಾಕ್ಷಿ . ದೆವಸ್ಥಾನದ ಬಳಿ ಸಾಕಷ್ಟು ಜನ ಇರುತ್ತಾರೆ ಅವರು ಯಾರಾದರೂ ಸಾಕ್ಷಿಗೆ ಬರಬಹುದಾಗಿತ್ತು ಎಂದರೆ ನನ್ನ ಮತ್ತು ಅರೋಪಿಯ ಮದ್ಯೆ ವ್ಯವಹಾರ ಅಗಿದ್ದು ಉಳಿದವರು ಯಾರು ಬರಲಿಲ್ಲ . ರೂ 10 ಲಕ್ಷ ಹಣಕ್ಕೆ ಬದ್ರತೆಗಾಗಿ ನಾನು ಏನನ್ನು ಪಡೆದುಕೊಂಡಿಲ್ಲ ಎಕೆಂದರೆ ಅಷ್ಟು ದೊಡ್ಡ ಮೊತ್ತಕ್ಕೆ ಬದ್ರತೆಗಾಗಿ ಏನನ್ನಾದರೂ ಪಡೆದು ಕೊಳ್ಳಬೇಕು ಎಂಬ ಬಗ್ಗೆ ನನಗೆ ಜ್ಞಾನ ಇಲ್ಲ . ಒಂದು ಬಾಂಡ ಮೇಲೆ ಅಥವಾ ಪಟ್ಟಿ ಯಮೇಲೆ ಬರೆದುಕೊಳ್ಳಬೇಕಿತ್ತು ಎಂದರೆ ನಾನು ಬರೆದು ಕೊಂಡಿಲ್ಲ . ದಿಃ9-2-2022 ರಂದು ಅರೋಪಿಯು ಚೆಕ ನ್ನು ಕೊಟ್ಟು ಹೋಗಿದ್ದಕ್ಕೆ ಯಾವ ಸಾಕ್ಷಿದಾರರು ಇಲ್ಲ ಆ ದಿನ ನಾನು ಒಬ್ಬಳೆ ಇದ್ದೆನು . ನ್ಯಾಯಾಲಯಕ್ಕೆ ಬರುವವರಗೆ ಅರೊಪಿಯ ಪರಿಚಯ ನಿಮಗೆ ನಿಮ್ಮ ಪರಚಯ ಆರೋಪಿಗೆ ಇರಲಿಲ್ಲ ಎಂದರೆ ಸರಿಯಲ್ಲ . ಯಾವಾಗ ನಿಮ್ಮ ವಕೀಲರು ಕಾಳಹಸ್ತಿಯಲ್ಲರುವ ವಿಶ್ವನಾಥ ಶರ್ಮಾ ನೊಂದಿಗೆ ರಾಜಿ ಮಾಡಿ ಕೊಳ್ಳಿ ಎಂದು ಹೇಳಿದಾಗ ನೀವು ಅರೋಪಿಯೊಂದಿಗೆ ಮಾತನಾಡಿರುತ್ತಿ ರಿ ಎಂದರೆ ಸರಿಯಲ್ಲ . ವಿಶ್ವನಾಥ ಶರ್ಮ ರವರಿಂದ ರಿಂದ ನೀವು ಚೆಕ್ ನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರ ಪಡಿಸಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಆರೋಪಿಯು ಅಮಾಯಕನಾಗಿದ್ದು ಸುಳ್ಳು ಪ್ರಕರಣ ಹಾಕಿ ಸತಾಯಿಸುತ್ತಿದ್ದೀರಿ ಎಂರದೆ ಸರಿಯಲ್ಲ .ದಿಃ30-5-2022 ರಂದು ಅರೋಪಿಯು ವಕೀಲರಿಗೆ ಕಳುಹಿಸಿದ ನೋಟಿಸು ಅವರಿಗೆ ಮುಟ್ಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಅರೋಪಿಯಿಂದ ನಿಮಗೆ ರೂ 10 ಲಕ್ಷ ಅಥವಾ ಯಾವುದೆ ಹಣ ಬರುವುದು ಇಲ್ಲ ಎಂದರೆ ಸರಿಯಲ್ಲ . ಅರೋಪಿಯಿಂದ ನಿಮಗೆ ಯಾವುದೆ ಹಣ ಬಾಕಿ ಇಲ್ಲ ಮತ್ತು ಅರೋಪಿ ಚೆಕ್ ಬೌನ್ಸ ಕೂಡ ಮಾಡಿಲ್ಲ ಎಂದರೆ ಸರಿಯಲ್ಲ . ಆರೊಪಿಯು ನಿಮಗೆ ಚೆಕ ನ್ನು ನೀಡದೆ ಇರುವುದರಿಂದ ಆರೋಪಿಯು ಸಂಪೂರ್ಣ ವಾಗಿ ನಿರಪರಾಧಿ ಯಾುಗಿರುತ್ತಾನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.